ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಒಲಂಪಿಕ್ಸ್/ಏಷಿಯನ್ ಗೇಮ್ಸ್‌ನ ಪದಕ ವಿಜೇತರುಗಳಿಗೆ ಸರ್ಕಾರದಲ್ಲಿ ಉದ್ಯೋಗಾವಕಾಶ ಕಲ್ಪಿಸುವ ಬಗ್ಗೆ

ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :-

720 (722) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಿನಾಂಕ : 03-02-2017ರಂದು ಧಾರವಾಡ ಜಿಲ್ಲೆಯಲ್ಲಿ ನಡೆದಂತಹ ರಾಜ್ಯ ಒಲಂಪಿಕ್ ಕ್ರೀಡಾಕೂಟದಲ್ಲಿ ಒಲಂಪಿಕ್ಸ್‌ನಲ್ಲಿ ಪದಕ ಗೆದ್ದವರಿಗೆ `ಎ' ವೃಂದದ ಹುದ್ದೆ ಮತ್ತು ಏಷಿಯನ್ ಗೇಮ್ಸ್ ಮಟ್ಟದಲ್ಲಿ ಗೆದ್ದಂತಹ ಪದಕ ವಿಜೇತರುಗಳಿಗೆ ಅವರವರ ವಿದ್ಯಾರ್ಹತೆಯ ಅನುಗುಣವಾಗಿ `ಬಿ' ವೃಂದದಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸಿ ಕೊಡುವುದಾಗಿ ಅಂದಿನ ಸರ್ಕಾರ ಘೋಷಣೆ ಮಾಡಿದ್ದು ನಿಜವೇ ;

(ಆ) ಹೌದಾಗಿದ್ದಲ್ಲಿ, ಈ ಸರ್ಕಾರದ ಘೋಷಣೆ ಈಗ ಯಾವ ಹಂತದಲ್ಲಿದೆ ;

(ಇ) ಸರ್ಕಾರದ ಘೋಷಣೆಯನ್ನು ತ್ವರಿತಗತಿಯಲ್ಲಿ ಜಾರಿಗೊಳಿಸಿದರೆ, ಬಹಳಷ್ಟು ಪ್ರತಿಭಾವಂತ ಕ್ರೀಡಾಪಟುಗಳಿಗೆ ಉದ್ಯೋಗಾವಕಾಶ ಕಲ್ಪಿಸಿಕೊಟ್ಟಂತಾಗುವುದಿಲ್ಲವೇ ?